1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿಸಿ ನಂಃ
5473/2012
ಪ್ರಾಸಾ. 1 ಚಾಸಾ. 5

ಸಾಕ್ಷಿದಾರರ ಹೆಸರು ಃ ಎ ರಾಮಚಂದ್ರ ಜೋಯಿಸ
ತಂದೆಯ ಹೆಸರು ಃ ವೈ ಭೀಮಾಜೋಯಿಸ
ವಯಸ್ಸು ಃ 59 ವರ್ಷ
ಉದ್ಯೋಗ ಃ ಚಾರ್ಟೆಡ್ ಅಕೌಂಟೆಂಟ್
ವಾಸ ಃ ಬೆಂಗಳೂರು

ಸಾಕ್ಷಿಯನ್ನು ಕರೆಸಿ ದಿಃ 02.08.2017 ರಂದು ಪ್ರಮಾಣ ಮಾಡಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಯು ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ನಾನು ನಿಪಿ-1 ಕ್ಕೆ ಸಿಸಿಬಿ ಕಚೇರಿಯಲ್ಲಿ ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನನಗೆ ಆರೋಪಿ ಭಾಸ್ಕರ್ ರೆಡ್ಡಿಇವರ ಕಂಪನಿಯಬಗ್ಗೆ ಒಬ್ಬ ಶ್ರೀ ಎಎಸ್ ಪಾಟೀಲ್ ಎನ್ನುವವರಿಂದ ತಿಳಿದು ಬಂದಿರುತ್ತದೆ. ನಾನು ದೇವನಹಳ್ಳಿ ಬಳಿ ಏರೋಜೋನಾ ಎಂಬ ಪ್ರಾಜೆಕ್ಟ್‌ನಲ್ಲಿ ಎರಡು ನಿವೇಶನಗಳನ್ನು ಅವುಗಳಲ್ಲಿ ಒಂದನ್ನು ನನ್ನಶ್ರೀಮತಿ ಲತಾ ಇವರ ಹೆಸರಿನಲ್ಲಿ ಹಾಗೂ ಇನ್ನೊಂದು ನಿವೇಶನವನ್ನು ನನ್ನ ಸಹೋದರ ಶ್ರೀ ಈಶ್ವರ ಜೋಯಿಸ ಇವರ ಹೆಸರಿನಲ್ಲಿ ಬುಕ್ ಮಾಡಿರುತ್ತೇನೆ. ನಾನುಸದರಿ ನಿವೇಶನಗಳನ್ನು ಬುಕ್ ಮಾಡಿರುವುದಕ್ಕೆ ಸದರಿ ಸಂಸ್ಥೆಗೆ 5,20,000-00 ರೂಗೆ ಚೆಕ್ಕನ್ನು ನೀಡಿರುತ್ತೇನೆ ಹಾಗೂ ಮೈಸಿಟಿ ಪ್ರಾಜೆಕ್ಟನಡಿ

ಒಂದು ನಿವೇಶನವನ್ನು ನನ್ನ ಹಾಗೂ ನನ್ನ ಸದರಿ ಶ್ರೀಮತಿಯವರ ಹೆಸರಿನಲ್ಲಿ ಜಂಟಿಯಾಗಿ ಬುಕ್ ಮಾಡಿರುತ್ತೇನೆ. ಸದರಿ ನಿವೇಶನವನ್ನು ಬುಕ್ ಮಾಡಿರುವುದಕ್ಕೆ ನಾನು ಸದರಿ ಕಂಪನಿಗೆ 2,35,000-00 ರೂಪಾಯಿಗಳಿಗೆ ಚೆಕ್ಕನ್ನು ನೀಡಿರುತ್ತೇನೆ. ಸದರಿ ನಿವೇಶನಗಳನ್ನು ಬುಕ್ ಮಾಡಿರುವುದಕ್ಕೆ ಸದರಿ ಕಂಪನಿಯವರು ನನಗೆ ರಸೀದಿಗಳನ್ನು ಹಾಗೂ ಕರಾರುಪತ್ರಗಳನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಸಂಸ್ಥೆಯವರು ಸದರಿ ನಿವೇಶನಗಳನ್ನು ಒಂದು ವರ್ಷದ ಒಳಗಡೆ ನೋಂದಣಿ ಮಾಡಿಸಿಕೊಡುವುದಾಗಿ ಹೇಳಿರುತ್ತಾರೆ ಹಾಗೂ ಒಂದು ವರ್ಷದ ಒಳಗೆ ಸದರಿ ನಿವೇಶನಗಳನ್ನು ನೋಂದಣಿ ಮಾಡಿಸಿ ಕೊಡದೇ ಇದ್ದರೆ ಶೇಕಡ 2ರಷ್ಟು ಬಡ್ಡಿಯನ್ನು ಸದರಿ ಹಣಕ್ಕೆ ತಿಂಗಳಿಗೆ ಕೊಡುವುದಾಗಿ ಹೇಳಿರುತ್ತಾರೆ, ಆದರೆ, ವಾಯಿದೆಯಂತೆ ಸದರಿ ಸಂಸ್ಥೆಯವರು ನನಗೆ ನಿವೇಶನಗಳನ್ನಾಗಲೀ ಕೊಟ್ಟಿರುವುದಿಲ್ಲ ಹಾಗೂ ನನ್ನ ಸದರಿ ಹಣವನ್ನಾಗಲೀ ನೀಡಿರುವುದಿಲ್ಲ. ಸನ್ 2009 ರಲ್ಲಿ ಸದರಿ ಸಂಸ್ಥೆಯು ನನ್ನಿಂದ 80ಸಾವಿರ ರೂಗಳನ್ನು ಹಾಗೂ ಇನ್ನೊಂದು ಸಲ 50 ಸಾವಿರ ರೂಗಳನ್ನು ಪಡೆದುಕೊಂಡಿರುತ್ತದೆ.

(ಈ ಹಂತದಲ್ಲಿ ಈ ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯ ಪಾಟೀಸವಾಲು ಮಾಡಲು ಅನುಮತಿ ನೀಡಬೇಕೆಂದು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾರ್ಥಿಸಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಹಿರಿಯ ಸ.ಸ.ಅ ರವರಿಂದ ಃ

ದಿನಾಂಕ 09.06.2011 ರಂದು ಸಿಸಿಬಿ ಪೊಲೀಸರು ನನ್ನನ್ನು ಹಾಗೂ ಶ್ರೀ ಸಂತೋಷ್ ಎನ್ನುವವರನ್ನು ತವಮ್ಮ ಕಚೇರಿಗೆ ಕರೆಸಿರುತ್ತಾರೆಂದರೆ ಸರಿ. ಸದರಿ ದಿನದಂದು ಸದರಿ ಸಿಸಿಬಿ ಕಚೇರಿಯಲ್ಲಿ ಆರೋಪಿತರ ಪರವಾಗಿ ನೋಂದಣಿ ಮಾಡಿಸಿಕೊಡುವ ಪ್ರಭಾರವನ್ನು ಹೊಂದಿದ್ದಂತಹ ಶ್ರೀ ಸತೀಶ್ ಎನ್ನುವವರು ಆರೋಪಿತರ ಸ್ವತ್ತಿಗೆ ಸೇರಿದಂತೆ ಸುಮಾರು 40 ಕ್ರಯಪತ್ರಗಳನ್ನು ಹಾಗೂ ಇನ್ನಿತರ ದಾಖಲಾತಿಗಳನ್ನು ಹಾಜರುಪಡಿಸಿದ್ದರ ಮೇರೆಗೆ

ಅವುಗಳನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿರುವುದಾಗಿ ಹೇಳಿದ್ದಕ್ಕೆ ಸಾಕ್ಷಿಅದು ತಮಗೆ ಗೊತ್ತಿರುವುದಿಲ್ಲ ಅದರೆ ನಿಪಿ-16 ಮೇಲೆ ಸಹಿ ಮಾಡಿರುವುದಾಗಿ ಹೇಳುತ್ತಾರೆ. ನಾನು 1ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 5, 18 ಮತ್ತು 19 ನೇ ಆರೋಪಿತರ ಪರ ಶ್ರೀ ಬಿ ಜೆ ಮಾನ್ಯವಕೀಲರಿಂದಃ

ಸಾಕ್ಷಿಗೆ ಈಗ ಸದರಿ ಸಂಸ್ಥೆಯನ್ನು ಯೂರು ನಡೆಸಿಕೊಂಡು ಹೊಗುತ್ತಿದ್ದಾರೆ ಹಾಗೂ ಅದರ ಮಾಲೀಕರು ಯಾರಾಗಿರುತ್ತಾರೆ ನಿಮಗೆ ತಿಳಿದಿರುತ್ತದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿ ಭಾಸ್ಕರ್‌ರೆಡ್ಡಿ ಹಾಗೂ ಟಿಆರ್ ರೆಡ್ಡಿ ಯಾಗಿರುತ್ತಾರೆ ಎಂದು ಹೇಳುತ್ತಾರೆ. ನಾನುಸದರಿ ಶ್ರೀ ಭಾಸ್ಕರ್ ರೆಡ್ಡಿ ಹಾಗೂ ಶ್ರೀ ಟಿಆರ್ ರೆಡ್ಡಿ ಇವರನ್ನು ಬಿಟ್ಟು ಇನ್ನಿತರರೊಂದಿಗೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲವೆಂದರೆ ಸರಿ. ನನಗೆ ಬೇರೆ ಇನ್ನಿತರ ಬೇರೆ ವ್ಯಕ್ತಿಗಳ ಹೆಸರು ಗೊತ್ತಿರುವುದಿಲ್ಲವೆಂದರೆಸರಿ.

ಪಾಟೀ ಸವಾಲು ಃಆರೋಪಿತರ ಪರಮಾನ್ಯ ವಕೀಲರಿಂದಃ

(1, 2, 8ನೇ ಆರೋಪಿತರ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟೀಸವಾಲನ್ನು ಮಾಡಲು ವೇಳೆಯನ್ನು ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ. ಹೇ. ಕೇ. ಸ. ಇ

1ನೇ ಅ. ಮು. ಮ. ದಂ. ನ್ಯಾ.